



ನಾಳೆಯ ಬೆಳಕು ದಕ್ಕುವುದೇ ನಮ್ಮ ಪಾಲಿಗೆ?



ಚಪ್ಪಾಳೆಗಳಿಲ್ಲ, ಉರಿದುಹೋದ ಕಾರ ಮೇಲಿನ ವೇದಿಕೆಯಲ್ಲಿ ಗುಂಡಿನ ಮೊರೆತಗಳೇ ಎಲ್ಲ...



ಕಪ್ಪಡರಿದ ಕಟ್ಟಡವೂ ಜೀವಂತಿಕೆಯನ್ನೇ ಹೊತ್ತ ಯುವಕರೂ

ಕೂಡಬೇಕಾದ ಜಾಗ ಛಿದ್ರವಾಗಿದೆ. ಚಕ್ರಗಳಿಗೆ ಬಿಗಿದ ದಪ್ಪ ಸರಪಳಿ ಸೋತು ಸಡಿಲಾಗಿದೆ. ದೂರದಲ್ಲೆಲ್ಲೋ ಗುಂಡಿನ ಮೊರೆತ ಕೇಳಿಸುತ್ತಿದೆ. ಎದುರಿಗೆ ತುಂಬಿಕೊಂಡಿರುವ ಕಪ್ಪಾದ ನೀರೂ ನೆತ್ತರ ವಾಸನೆಯನ್ನೇ ಪೂಸುತ್ತಿರುವಂತಿದೆ. ಆ ಟ್ಯಾಂಕರ್‌ನ ಮೇಲೆ ಶುಭ್ರ ಬಟ್ಟೆ ತೊಟ್ಟು, ಎದೆಗೆ ಅಡ್ಡಲಾಗಿ ಗ್ರ್ಯಾಜುಯೇಷನ್ ಡೇ ಪಟ್ಟಿ ತೊಟ್ಟು, ನಸುನಗುತ್ತಾ ನಿಂತಿದ್ದಾರೆ ಹತ್ತಾರು ವಿದ್ಯಾರ್ಥಿಗಳು! ಹೀಗೊಂದು ಗ್ರ್ಯಾಜುಯೇಷನ್ ಡೇ ಸಾಧ್ಯವಾ?

ಹೀಗೆ ರಣರಂಗದಲ್ಲಿ ಗ್ರ್ಯಾಜುಯೇಷನ್ ಡೇ ನಡೆದಿದ್ದು ಉಕ್ರೇನ್‌ನಲ್ಲಿ. ರಷ್ಯಾ ಮತ್ತು ಉಕ್ರೇನ್ ನಡುವೆ ನಿರಂತರವಾಗಿ ಯುದ್ಧ ನಡೆಯುತ್ತಲೇ ಇರುವುದು ನಮಗೆಲ್ಲರಿಗೂ ಗೊತ್ತೇ ಇದೆ. ಈ ಯುದ್ಧದ ಪರಿಣಾಮವನ್ನು ಚರಿತ್ರೆಯ ಪುಟಗಳಲ್ಲಿ ವಿಭಿನ್ನವಾಗಿ ದಾಖಲೆ ಮಾಡಲು ಛಾಯಾಗ್ರಾಹಕ ಸ್ಟ್ಯಾನಿಸ್ಲಾವ್ ಸೆನ್ಯಾಕ್ ಕಂಡುಕೊಂಡ ದಾರಿ ಹೇಗಿದೆ ಎನ್ನುವುದನ್ನು ಇಲ್ಲಿನ ಚಿತ್ರಗಳೇ ಹೇಳುತ್ತಿವೆ.

ಸ್ಟ್ಯಾನಿಸ್ಲಾವ್ ಮುಖ್ಯವಾಗಿ ವೆಡ್ಡಿಂಗ್ ಫೋಟೊಗ್ರಫಿಯನ್ನು ವೃತ್ತಿಯಾಗಿ ತೆಗೆದುಕೊಂಡವರು. ಮದುವೆ, ನಿಶ್ಚಿತಾರ್ಥದಂತಹ ಸಂಭ್ರಮದ ಗಳಿಗೆಗಳನ್ನು ಸೆರೆಹಿಡಿಯುತ್ತಿದ್ದ ಅವರ ಕ್ಯಾಮೆರಾ, ಯುದ್ಧಾನಂತರ ದಾರುಣ ಸನ್ನಿವೇಶಗಳಿಗೆ ಸಾಕ್ಷಿಯಾಗಬೇಕಾಯಿತು. ಅಲ್ಲಿಂದ ಅವರು ಯೋಚಿಸುವ ರೀತಿಯೂ ಬದಲಾಯಿತು. ಯುದ್ಧ ಮತ್ತು ಅದರ ಪರಿಣಾಮಗಳನ್ನು ದಾಖಲು ಮಾಡುವ ಕೆಲಸದಲ್ಲಿ ಅವರು ಹೆಚ್ಚಾಗಿ ತೊಡಗಿಕೊಂಡರು. ಈ ಕೆಲಸದಲ್ಲಿದ್ದಾಗಲೇ ಅವರಿಗೆ ಅಂಥದ್ದೊಂದು ಆಲೋಚನೆ ಹೊಳೆದಿದ್ದು. ‘ಈಗಿನ ವಿದ್ಯಾರ್ಥಿಗಳನ್ನು ಬಳಸಿಕೊಂಡೇ ಈ ಯುದ್ಧದ ಭೀಕರತೆಯನ್ನು ದಾಖಲು ಮಾಡಲು ಸಾಧ್ಯ. ಈಗಿನ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಮಕ್ಕಳಾದಾಗ ಅವರು ಈ ಫೋಟೊ ತೋರಿಸಿ ಈಗಿನ ಯುದ್ಧದ ದಾರುಣ ಕಥೆಯನ್ನು ಹೇಳಬೇಕು. ಅದರಿಂದ ಪಾಠ ಕಲಿತು ಇಂಥ ಯುದ್ಧಗಳು ಭವಿಷ್ಯದಲ್ಲಿ ಮರುಕಳಿಸದಂತೆ ತಡೆಯಬೇಕು’ ಎಂಬುದು ಅವರ ಉದ್ದೇಶ. ಈ ಯೋಜನೆಯಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು ತಮ್ಮ ಜೊತೆ ಕೈಜೋಡಿಸಬಹುದು ಎಂಬ ಅವರ ಕರೆಗೆ ಸ್ಪಂದಿಸಿ ನಲ್ವತ್ತು ವಿದ್ಯಾರ್ಥಿಗಳು ಜೊತೆಯಾದರು.

ಮುಂದೆ ಆಗಿದ್ದೇನು ಎನ್ನುವುದನ್ನು ಈ ಚಿತ್ರಗಳೇ ಹೇಳುತ್ತಿವೆ. ಯುದ್ಧದ ವಿನಾಶ ಮತ್ತು ಯುವ ಮನಸ್ಸುಗಳ ಜೀವಂತಿಕೆ ಎರಡೂ ಮುಖಾಮುಖಿಯಾದಂತಿರುವ ಈ ಚಿತ್ರಸರಣಿ ಯುದ್ಧನಿರತರ ಕಲ್ಲುಹೃದಯ ದಾಟಿ ಒಳಗೆ ಇಣುಕಬಹುದೇ?

ಪ್ರತಿಕ್ರಿಯಿಸಿ: feedback@sudha.co.in